# ಏನು ಸಂಭವಿಸಿತು?



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಕೀರ್ತ 100:3; ಅ.ಕೃ 17:26, ಆ.ಕಾಂಡ 2:7, 18–25, ಆ.ಕಾಂಡ 1:28,29, ಆ.ಕಾಂಡ 3:15.

**ಸ್ಮರಣವಾಕ್ಯ : "ಆಮೇಲೆ ದೇವರು– ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ.... ಅಂದನು. ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು; ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು; ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿದನು"** (ಆದಿಕಾಂಡ 1:26,27).

ಸತ್ಯವೇದದಲ್ಲಿ ಮಾನವನ ಸೃಷ್ಟಿಯ ವಿವರಣೆಯು ನಿರೀಕ್ಷೆ, ಸಂತೋಷ ಮತ್ತು ಪರಿಪೂರ್ಣತೆಯಿಂದ ತುಂಬಿದೆ. ಪ್ರತಿದಿನವೂ ಸೃಷ್ಟಿಕಾರ್ಯವಾದ ಮೇಲೆ "ದೇವರು ಅದನ್ನು ಒಳ್ಳೇದೆಂದು ನೋಡಿದನು" ಎಂಬ ಹೇಳಿಕೆಯನ್ನು ಹೊಂದಿದೆ. ಖಂಡಿತವಾಗಿಯೂ ದೇವರಸೃಷ್ಟಿ, ಬಿರುಗಾಳಿ, ಭೂಕಂಪ, ಕ್ಷಾಮ ಮತ್ತು ರೋಗಗಳನ್ನು ಒಳಗೊಂಡಿರಲಿಲ್ಲ. ಏನು ಸಂಭವಿಸಿತು?

ಆರನೆ ದಿನದ ಸೃಷ್ಟಿಕಾರ್ಯವು "ದೇವರು ಅದನ್ನು ಬಹಳ ಒಳ್ಳೇದೆಂದು ನೋಡಿದನು" ಎಂಬ ದೈವೀಕ ಉಚ್ಚಾರಣೆಯಿಂದ ಮುಕ್ತಾಯವಾಗುತ್ತದೆ. ದೇವರು ಆರನೆಯ ದಿನದಲ್ಲಿ ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದ್ದರಿಂದ

---

*** ಈ ವಾರದ ಪಾಠವನ್ನು ಏಪ್ರಿಲ್ 3ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.**

ಉಂಟಾದ ಯಾವುದಕ್ಕೂ ಈ ಒಂದು ವಿಶಿಷ್ಟತೆ ಇಲ್ಲದಿರುವುದರಿಂದ ಅದು ಬಹಳ ಒಳ್ಳೇದಾಗಿತ್ತೆಂದು ಆದಿಕಾಂಡವು ವಿವರಿಸುತ್ತದೆ. ಹೌದು, ಮನುಷ್ಯನು ದೇವಸ್ವರೂಪದಲ್ಲಿ ಗಂಡುಹೆಣ್ಣಾಗಿ ಉಂಟಾದುದರಿಂದ ಅವರು ಎಲ್ಲಾ ವಿಧದಲ್ಲಿಯೂ ಪರಿಪೂರ್ಣರಾಗಿದ್ದರು. ಹಾಗಾಗಿ, ಪರಿಪೂರ್ಣತೆಗೆ ಭಂಗತರುವ ಕೊಲೆಗಾರರು, ಕಳ್ಳರು, ಸುಳ್ಳರು, ಸುಲಿಗೆಕೋರರು ಮತ್ತು ಎಲ್ಲಾ ವಿಧದ ಕೆಡುಕರು ಅವಶ್ಯಕವಾಗಿ ಒಳಗೊಂಡಿರಲಿಲ್ಲ. ಏನು ಸಂಭವಿಸಿತು?

ಈ ವಾರದ ಅಧ್ಯಯನದಲ್ಲಿ ದೇವರು ಏನನ್ನು ಮೊದಲು ಉಂಟುಮಾಡಿದನು ಮತ್ತು ನಂತರ ಪರಿಪೂರ್ಣವಾದ ಸೃಷ್ಟಿಗೆ ಏನು ಸಂಭವಿಸಿತು ಎಂಬುದನ್ನು ನೋಡುತ್ತೇವೆ. ಅಂತಿಮವಾಗಿ ದೇವರು ಇವುಗಳನ್ನೆಲ್ಲಾ ಸರಿಪಡಿಸುವುದಕ್ಕೆ ಏನು ಮಾಡುತ್ತಾನೆಂಬುದು ಈ ತ್ರೈಮಾಸಿಕದ ವಿಷಯವಾಗಿದೆ.

ಈ ಪಾಠದ ಕಿರುನೋಟ: ಸೃಷ್ಟಿಯ ಬಗ್ಗೆ ಸತ್ಯವೇದವು ನಮಗೆ ಏನನ್ನು ಬೋಧಿಸುತ್ತದೆ? ಮಾನವನ ಜೊತೆಗೆ ದೇವರು ಎಂತಹ ಸಂಬಂಧವನ್ನು ಇಟ್ಟುಕೊಳ್ಳಲು ಬಯಸುತ್ತಾನೆ? ಒಳ್ಳೆಯದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಹಣ್ಣಿನ ಮರವನ್ನು ಸೃಷ್ಟಿಸಿದ ಉದ್ದೇಶವೇನು? ಪಾಪದಲ್ಲಿ ಬಿದ್ದುಹೋದ ಮೇಲೆ ಆದಾಮ ಮತ್ತು ಹವ್ವಳಿಗೆ ಯಾವ ನಿರೀಕ್ಷೆಯನ್ನು ಕೊಡಲಾಯ್ತು?

**ಭಾನುವಾರ** **ಮಾರ್ಚ್ 28**

## ಒಂದರ ಕೆಳಗೆ ಒಂದರಂತೆ ಕುಳಿತ ಆಮೆಗಳು

"ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು" (ಆದಿಕಾಂಡ 1:1).

ವಿಜ್ಞಾನಿಯೊಬ್ಬರು ಸೂರ್ಯನ ಸುತ್ತ ಸುತ್ತುವ ಗ್ರಹಗಳ ಅಕ್ಷಗಳ ಬಗ್ಗೆ ಉಪನ್ಯಾಸ ಮಾಡುತ್ತಿರುವಾಗ ಹಿರಿಯ ಮಹಿಳೆಯೊಬ್ಬರು ಎದ್ದುನಿಂತು ಭೂಮಿಯು ದುಂಡಾಗಿರುವ ತಟ್ಟೆಯಾಗಿದ್ದು ಅದನ್ನು ಆಮೆಯೊಂದು ತನ್ನ ಬೆನ್ನಿನ ಮೇಲೆ ಹೊತ್ತುಕೊಂಡಿದೆಯೆಂದು ಹೇಳಿದರು. ಅದಕ್ಕೆ ವಿಜ್ಞಾನಿಯು ಆ ಮಹಿಳೆಯನ್ನು ಕುರಿತು "ಅಮ್ಮನವರೇ, ಆ ಆಮೆಯು ಯಾವುದರ ಮೇಲೆ ಕುಳಿತಿದೆ?" ಎಂದು ಹಾಸ್ಯ ಮಾಡಿದರು. "ಆ ಆಮೆಯು ಮತ್ತೊಂದು ಆಮೆಯ ಮೇಲೆ ಕುಳಿತಿದೆ" ಎಂದು ಆ ಮಹಿಳೆಯು ಉತ್ತರಕೊಟ್ಟರು. ಮತ್ತೆ ವಿಜ್ಞಾನಿಯು

"ಆ ಮತ್ತೊಂದು ಆಮೆಯು ಯಾವುದರ ಮೇಲೆ ಕುಳಿತಿದೆ?" ಎಂದು ಹಾಸ್ಯ ಮಾಡುತ್ತಾ ಕೇಳಿದರು. ಆ ಮತ್ತೊಂದು ಆಮೆಯು ಸಹ ಇನ್ನೊಂದು ಆಮೆಯ ಮೇಲೆ ಕುಳಿತಿದೆ, ಒಂದರ ಕೆಳಗೆ ಇನ್ನೊಂದು ಆಮೆ ಕಣಪ್ಪ! ಎಂಬುದಾಗಿ ತಮ್ಮ ಬೆರಳಿನಿಂದ ಹಿರಿಯ ಮಹಿಳೆಯು ವಿಜ್ಞಾನಿಯ ಮುಖಕ್ಕೆ ತಿವಿದರು.

ಈ ಕಥೆಯು ಅತಿಮುಖ್ಯವಾದ ಮನುಷ್ಯನ ಅಸ್ತಿತ್ವದ ಬಗ್ಗೆ ಮತ್ತು ಇಡೀ ವಿಶ್ವವು ಯಾವ ವಿಧವಾಗಿದೆ ಎಂಬುದನ್ನು ಹೇಳುತ್ತದೆ.

ನಾವು ಯಾವ ಲೋಕದಲ್ಲಿ ಇದ್ದೇವೆಯೋ ಅದು ನಮ್ಮ ಸ್ವಂತ ಆಯ್ಕೆಯಲ್ಲ. ನಾವು ಇಲ್ಲೇಕಿದ್ದೇವೆ? ನಾವು ಇಲ್ಲಿಗೆ ಹೇಗೆ ಬಂದೆವು? ಕಡೆಯದಾಗಿ ನಾವೆಲ್ಲರೂ ಎಲ್ಲಿಗೆ ಹೋಗುತ್ತೇವೆ?

ಇವು ಜನರು ಸಾಮಾನ್ಯವಾಗಿ ಕೇಳುವ ಮೂಲಭೂತವಾದ ಪ್ರಶ್ನೆಗಳಾಗಿವೆ, ಯಾಕೆಂದರೆ ನಾವ್ಯಾರು ಮತ್ತು ನಾವು ಇಲ್ಲಿಗೆ ಹೇಗೆ ಬಂದೆವು ಎಂಬುದರ ಅರಿವು ನಾವು ಇಲ್ಲಿ ಹೇಗೆ ಜೀವಿಸುತ್ತೇವೆ ಮತ್ತು ಹೇಗೆ ನಡೆದುಕೊಳ್ಳುತ್ತೇವೆ ಎಂಬುದರ ಮೇಲೆ ಪರಿಣಾಮ ಬೀರುವಂಥದ್ದಾಗಿದೆ.

ಈ ವಚನಗಳನ್ನು ನೋಡಿರಿ: ಆದಿಕಾಂಡ 1:1, ಕೀರ್ತನೆಗಳು 100:3; ಯೆಶಾಯ 40:28, ಎಫೆಸದವರಿಗೆ 3:9 ಮತ್ತು ಇಬ್ರಿಯ 1:2,10. ಮೇಲಿನ ಕೆಲವು ಪ್ರಶ್ನೆಗಳಿಗೆ ಈ ವಾಕ್ಯಗಳು ಹೇಗೆ ತಮ್ಮದೇ ಆದ ರೀತಿಯಲ್ಲಿ ಉತ್ತರವನ್ನು ಕೊಡುತ್ತವೆ? ಯಾವ ಒಂದು ವಿಷಯದಲ್ಲಿ ಇವುಗಳ ಮಧ್ಯೆ ಸಮಾನತೆ (ಹೋಲಿಕೆ) ಇದೆ?

ಆದಿಕಾಂಡ 1:1ರಲ್ಲಿರುವ ಸ್ವಾರಸ್ಯಕರವಾದುದುದೇನೆಂದರೆ (ಇತರೆ ವಚನಗಳು ಸಹ) ದೇವರು ತಾನೇ ಸೃಷ್ಟಿಕರ್ತನೆಂದು ಸಾಬೀತುಪಡಿಸಲು ಪ್ರಯತ್ನಿಸುತ್ತಿಲ್ಲ. ಈ ಅಂಶವನ್ನು ದೃಢಪಡಿಸಲು ಸವಿವರಣೆಯ ವಾದಗಳನ್ನು ಮಾಡುತ್ತಿಲ್ಲ. ಇದನ್ನು ಸಮರ್ಥಿಸಿಕೊಳ್ಳುವ ವಿವರಿಸುವ ಇಲ್ಲವೆ ಸಾಬೀತುಪಡಿಸುವ ಯಾವ ಪ್ರಯತ್ನವನ್ನೂ ಮಾಡುವ ಬದಲಾಗಿ ನೇರವಾಗಿ, ಸರಳವಾಗಿ ಮತ್ತು ಸ್ಪಷ್ಟವಾಗಿ ತಿಳಿಸುತ್ತಿವೆ. ಇದನ್ನು ನಾವು ನಂಬಿಕೆಯಿಂದ ಅಂಗೀಕಾರ ಮಾಡಿಕೊಳ್ಳುತ್ತೇವೆ ಅಥವಾ ನಿರಾಕರಿಸುತ್ತೇವೆ. ನಿಜವಾಗಿ ಹೇಳಬೇಕೆಂದರೆ, ಸೃಷ್ಟಿಯ ಪ್ರಕ್ರಿಯೆ

ನಡೆಯುವಾಗ ಅದನ್ನು ನೋಡಲು ನ್ಯಾಯ್ವಾರು ಇರಲಿಲ್ಲದ ಒಂದು ಸರಳವಾದ ಕಾರಣದಿಂದ ನಂಬಿಕೆಯಿಂದ ಮಾತ್ರವೇ ಇವುಗಳನ್ನು ಒಪ್ಪಿಕೊಳ್ಳಬಹುದಾಗಿದೆ. ನಮ್ಮ ಸೃಷ್ಟಿಕಾರ್ಯವೇ ನಡೆಯುವಾಗ ಅಲ್ಲಿ ನಮ್ಮ ಇರುವಿಕೆಯು ಒಂದು ಅಸಾಧ್ಯವಾದ ತರ್ಕವಾಗಿದೆ. ದೈವ ಸೃಷ್ಟಿಯನ್ನು ಒಪ್ಪುವ ನಾವಾಗಲೀ, ಒಪ್ಪದಿರುವ ಜಾತ್ಯಾತೀತರಾಗಲೀ ಸೃಷ್ಟಿಯ ಸಂಭವಗಳು ನಡೆಯುವಾಗ ಅವುಗಳನ್ನು ವೀಕ್ಷಿಸಲು ಅಲ್ಲಿರಲಿಲ್ಲವಾದ್ದರಿಂದ ನಂಬಿಕೆಯ ದೃಷ್ಟಿಯಿಂದ ಮಾತ್ರ ನೋಡಬೇಕಾಗುತ್ತದೆ.

ಆದಾಗ್ಯೂ, ದೇವರು ಸಮರ್ಪಕವಾದ ಕಾರಣಗಳನ್ನು ಕೊಡದೆ ತನ್ನನ್ನು ಸೃಷ್ಟಿಕರ್ತನೆಂದು ನಂಬಿಕೊಳ್ಳಲು ನಮ್ಮನ್ನು ಕೇಳುತ್ತಿಲ್ಲ. ನಾವು ಯಾವುದನ್ನಾದರೂ ನಂಬಬೇಕು ಎಂದರೆ ಒಂದಿಷ್ಟು ಪ್ರಮಾಣದ ನಂಬಿಕೆ (ವಿಶ್ವಾಸ) ನಮ್ಮಲ್ಲಿರಬೇಕು ಎಂಬ ಅರಿವನ್ನಿಟ್ಟುಕೊಂಡು ನಾವು ಕೇವಲ ಆಕಸ್ಮಿಕವಾಗಿ ಉಂಟಾಗಿಲ್ಲ, ಆದರೆ ದೇವರು ಒಂದು ಉದ್ದೇಶದಿಂದ ನಮ್ಮನ್ನು ಇಲ್ಲಿಟ್ಟಿದ್ದಾನೆಂದು ನಂಬಿಕೆ ಇಡುವುದು ಒಂದು ಅರ್ಥವನ್ನು ಕೊಡುತ್ತದೆ ಎಂಬುದಕ್ಕೆ ಕಾರಣಗಳನ್ನು ಪಟ್ಟಿಮಾಡಿರಿ.

**ಸೋಮವಾರ** **ಮಾರ್ಚ್ 29**

## ಸೃಷ್ಟಿಕರ್ತನ ಸ್ವರೂಪದಲ್ಲಿ (ಆ.ಕಾಂಡ 1:27)

ದೇವರು ಮನುಷ್ಯನನ್ನು "ತನ್ನ ಸ್ವರೂಪದಲ್ಲಿ" ಉಂಟುಮಾಡಿದನು... ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿದನು ಎಂಬುದಾಗಿ ಸತ್ಯವೇದವು ಹೇಳುತ್ತದೆ (ಆ.ಕಾಂಡ 1:27). ಈ ಆಲೋಚನೆಯನ್ನು ಉಪಯೋಗಿಸಿಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಕೊಡಿರಿ:

1. ದೇವರು ನಮ್ಮನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನೆಂಬುದರ ಅರ್ಥವೇನು? ಯಾವ ರೀತಿಯಲ್ಲಿ ನಾವು ಆತನ ಸ್ವರೂಪದಲ್ಲಿದ್ದೇವೆ?
2. ಆದಿಕಾಂಡದಲ್ಲಿರುವ ಸೃಷ್ಟಿಯ ವಿವರಣೆಯಲ್ಲಿ ದೇವರು ಮನುಷ್ಯನ್ನಲ್ಲದೆ ಮತ್ತ್ಯಾವುದನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು? ಮತ್ತ್ಯಾವುದನ್ನು ಉಂಟುಮಾಡಿಲ್ಲವಾದರೆ ಭೂಮಿಯಲ್ಲಿ ಉಂಟಾದ ಇತರ ಸೃಷ್ಟಿಗಳಿಗೆ ಪ್ರತಿಯಾಗಿ ಮನುಷ್ಯನ ವಿಶಿಷ್ಟವಾದ ಸ್ಥಿತಿಯ ಬಗ್ಗೆ

ಇದು ಏನು ಹೇಳುತ್ತದೆ? ಈ ವೈರುದ್ಧ್ಯದಲ್ಲಿ ನಾವು ಯಾವ ಪಾಠಗಳನ್ನು ಹೊಂದಿಕೊಳ್ಳಬಹುದು?

3. ದೇವರು ಸೃಷ್ಟಿಸಿರುವ ಇತರೆ ಜಾತಿಯ ಸೃಷ್ಟಿಗಳಿಗಿಂತ ಮನುಷ್ಯ ಜಾತಿಯನ್ನು ವಿಭಿನ್ನಪಡಿಸುವ ಮತ್ತ್ಯಾವ ಅಂಶಗಳನ್ನು ಸೃಷ್ಟಿಯ ವಿವರಣೆಯಲ್ಲಿ ನೋಡುತ್ತೇವೆ? (ಆ.ಕಾಂಡ 2:7, 18–25ನ್ನು ನೋಡಿರಿ).

ನಾವು ದೇವರ ಬಗ್ಗೆ ಮನುಷ್ಯನ ಪರಿಭಾಷೆಯಲ್ಲಿ ಮಾತಾಡಬೇಕಾಗಿದೆ– ಯಾದರೂ ದೇವರು ಒಬ್ಬ ಆತ್ಮಸ್ವರೂಪನು ಎಂಬುದನ್ನು ಮರೆಯಬಾರದು (ಯೋಹಾನ 4:24), ಆತನು ದೈವೀಕ ಸ್ವಭಾವವನ್ನು ಹೊಂದಿರುತ್ತಾನೆ. ಮನುಷ್ಯರಾದ ನಮಗೆ ದೇವರ ವಿಷಯದಲ್ಲಿ ಬಹಳಷ್ಟು ನಿಗೂಢವಾಗಿ ಉಳಿದಿದ್ದರೂ ನಮ್ಮ ದೈಹಿಕ ಮಾನಸಿಕ ಮತ್ತು ಆತ್ಮೀಕ ಸ್ವಭಾವಗಳು ಒಂದಿಷ್ಟು ರೀತಿಯಲ್ಲಿ ನಮ್ಮ ಸೃಷ್ಟಿಕರ್ತನನ್ನು ಪ್ರತಿಬಿಂಬಿಸುತ್ತವೆ. ಸತ್ಯವೇದವು ನಮ್ಮ ಮಾನಸಿಕ ಮತ್ತು ಆತ್ಮೀಕ ಅಂಶಗಳಿಗೆ ಹೆಚ್ಚು ಒತ್ತುಕೊಡುತ್ತದೆ. ಈ ಅಂಶಗಳಲ್ಲಿ ನಾವು ಬೆಳವಣಿಗೆ ಮತ್ತು ಸುಧಾರಣೆಗಳನ್ನು ಹೊಂದಿಕೊಳ್ಳಬಹುದು. ಮನುಷ್ಯನ ವಿಶಿಷ್ಟವಾದ ಮನಸ್ಸು ದೇವರೊಂದಿಗೆ ಸಂಬಂಧವನ್ನು ಪೋಷಿಸಲು ಸಾಧ್ಯವಾಗುವಂತೆ ಮಾಡುತ್ತದೆ. ಭೂಮಿಯ ಮೇಲೆ ಸೃಷ್ಟಿಯಾದ ಇತರೆ ಜೀವಿಗಳಲ್ಲಿ ಇದು ಸಾಧ್ಯವಾಗುವುದಿಲ್ಲ.

ದೇವರು ಸ್ತ್ರೀಯನ್ನು ಉಂಟುಮಾಡಿದ ವಿಶಿಷ್ಟ ರೀತಿಯನ್ನು ಸಹಾ ಗಮನಿಸಿರಿ, ಪುರುಷರು ಮತ್ತು ಸ್ತ್ರೀಯರು ದೇವರ ಸ್ವರೂಪದಲ್ಲಿ ಉಂಟಾಗುವ ವಿಶೇಷವಾದ ಸೌಭಾಗ್ಯವನ್ನು ಈರ್ವರೂ ಹಂಚಿಕೊಂಡಿದ್ದಾರೆ. ಅವರ ಸೃಷ್ಟಿಯಲ್ಲಿ ಒಬ್ಬರು ಮತ್ತೊಬ್ಬರಿಗಿಂತ ಕೀಳು ಎಂಬ ಸುಳಿವು ಸಿಗುವುದಿಲ್ಲ. ದೇವರು ಈರ್ವರನ್ನೂ ಒಂದೇ ಸಾಮಗ್ರಿಯಿಂದ ಉಂಟುಮಾಡಿದನು. ದೇವರು ಈರ್ವರನ್ನು ಆರಂಭದಿಂದಲೂ ಸಮಾನರನ್ನಾಗಿ ಮಾಡಿ ಅವರು ಒಟ್ಟಾಗಿ ತನ್ನ ಜೊತೆ ವಿಶೇಷವಾದ ಸಂಬಂಧದಲ್ಲಿರುವಂತೆ ಅವರನ್ನು ಇಟ್ಟನು.

ದೇವರು ಕೊಟ್ಟ ಸ್ವಭಾವವನ್ನು ದೇವರಿಗೆ ಮಹಿಮೆ ತರುವ ರೀತಿಯಲ್ಲಿ ಅಭಿವೃದ್ಧಿಪಡಿಸಿಕೊಳ್ಳಲು ಸ್ತ್ರೀ ಮತ್ತು ಪುರುಷ ಈರ್ವರೂ ಸಮಾನವಾದ

ಅವಕಾಶವನ್ನು ಹೊಂದಿದ್ದರು. "ಸ್ವತಃ ದೇವರೇ ಆದಾಮನಿಗೆ ಸಂಗಾತಿಯನ್ನು ಕೊಟ್ಟನು. ದೇವರು ಆದಾಮನಿಗೆ ಸರಿ ಬೀಳುವಂತಹ ಸಹಕಾರಿಯನ್ನು ಅವನ ಜೊತೆ ಪ್ರೀತಿಯಲ್ಲಿ ಮತ್ತು ಸಹಾನುಭೂತಿಯಲ್ಲಿ ಒಂದಾಗಿರುವುದಕ್ಕೆ ಉಂಟುಮಾಡಿದನು. ಆದಾಮನು ಪಕ್ಕೆಯಿಂದ ತೆಗೆದ ಎಲುಬಿನಿಂದ ಹವ್ವಳು ಮಾಡಲ್ಪಟ್ಟಳು ಎಂಬುದು ಆಕೆಯು ತಲೆಯಾಗಿ ಆತನನ್ನು ನಿಯಂತ್ರಣ ಮಾಡದೆ ಅಥವಾ ಕಾಲುಗಳಾಗಿ ತುಳಿಯಲ್ಪಡದೆ ಅವನಿಗೆ ಸಮನಾಗಿ ಪಕ್ಕದಲ್ಲಿದ್ದುಕೊಂಡು ಆತನಿಂದ ಪ್ರೀತಿಸಲ್ಪಟ್ಟ ಸಂರಕ್ಷಣೆ ಹೊಂದುವುದನ್ನು ಸೂಚಿಸುವಂಥದ್ದಾಗಿದೆ"– ಎಲೆನ್ ಜಿ ವೈಟಮ್ಮನವರ "ನಮ್ಮ ಪೂರ್ವಿಕರು ಮತ್ತು ಪ್ರವಾದಿಗಳು" ಎಂಬ ಪುಸ್ತಕದಲ್ಲಿ 46ನೇ ಪುಟ.

**ಮಂಗಳವಾರ** **ಮಾರ್ಚ್ 30**

## ದೇವರು ಮತ್ತು ಮಾನವ ಜೊತೆಯಾಗಿ (ಆ.ಕಾಂಡ 1:28,29)

ಸತ್ಯವೇದದಲ್ಲಿ ದೇವರು ಮನುಷ್ಯನನ್ನು ಕುರಿತು ಆಡಿದ ಮೊದಲ ಮಾತನ್ನು ಗಮನಿಸೋಣ. ಆತನು ಅವರಲ್ಲಿರುವ ಸಂತಾನಾಭಿವೃದ್ಧಿ ಮಾಡುವ ಸಾಮರ್ಥ್ಯದ ಬಗ್ಗೆ ಅವರಿಗೆ ಹೇಳುತ್ತಾನೆ. ಆತನು ಭೂಮಿಯಲ್ಲಿರುವ ಇತರ ಸೃಷ್ಟಿಯನ್ನು ಅವರಿಗೆ ತೋರಿಸುತ್ತಾ– ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಪಡಿಸಿಕೊಳ್ಳಿರಿ.... ಎಲ್ಲಾ ಜೀವಗಳ ಮೇಲೆ ದೊರೆತನ ಮಾಡಿರಿ ಎಂದು ಹೇಳುತ್ತಾನೆ. ಅವರಿಗೆ ಆಹಾರವಾಗಿ ಕೊಟ್ಟ ಗಿಡಮರಗಳನ್ನು ತೋರಿಸುತ್ತಾನೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ದೇವರು ಆ ಪುರುಷನಿಗೂ ಸ್ತ್ರೀಗೂ ಮೊದಲು ಆಡಿದ ಮಾತು ನಿರ್ದಿಷ್ಟವಾಗಿ ಪ್ರಾಕೃತಿಕ ಭೂಮಿಯ ಜೊತೆ ಅವರಿಗಿರುವ ಸಂಪರ್ಕ ಮತ್ತು ಸಂಬಂಧವನ್ನು ಕುರಿತು ಹೇಳುತ್ತದೆ. ಆದಿಕಾಂಡ 1:28,29 ವಚನಗಳ ದೇವರು ಈ ಭೌತಿಕ ಪ್ರಪಂಚವನ್ನು ಯಾವ ದೃಷ್ಟಿಯಿಂದ ನೋಡಿದನೆಂದು ಹೇಳುತ್ತವೆ. ನಮ್ಮ ಸಂತೋಷಕ್ಕಾಗಿ ಉಂಟಾದ ಭೌತಿಕ ವಸ್ತುಗಳಲ್ಲಿ ಕೆಟ್ಟದ್ದೇನಾದರೂ ಇತ್ತೆಂದು ಈ ವಚನಗಳು ಸೂಚಿಸುತ್ತವೆಯೇ? ಮಾನವ ಚರಿತ್ರೆಯ ಈ ಮೊದಲ ದೃಶ್ಯಗಳಲ್ಲಿ ನಾವು ಸೃಷ್ಟಿಯ ಜೊತೆ ಹೇಗೆ ಸಂಬಂಧಪಡುತ್ತೇವೆ ಎಂಬುದರ ಬಗ್ಗೆ ಯಾವ ಪಾಠಗಳನ್ನು ಕಲಿಯಬಹುದು?

ಹಾಗೂ, ಈ ಮಾತಿನೊಂದಿಗೆ ದೇವರು ಮನುಷ್ಯನ ಸಂಬಂಧ ಹೊಂದಲು ಆರಂಭಿಸಿದನು. ಆತನು ಅವರೊಂದಿಗೆ ಮಾತಾಡಿದನು, ಆಜ್ಞೆಗಳನ್ನು ಕೊಟ್ಟನು. ಅವರು ಏನು ಮಾಡಬೇಕೆಂದು ಹೇಳಿದನು. ಈ ಮಾತುಗಳಲ್ಲಿ ಮನುಷ್ಯನು ತೆಗೆದುಕೊಳ್ಳಬೇಕಾಗಿರುವ ಜವಾಬ್ದಾರಿಯು ಸಹಾ ಅಡಕವಾಗಿದೆ. ದೇವರು ತಾನು ಉಂಟುಮಾಡಿದ ಅದ್ಭುತವಾದ ಸೃಷ್ಟಿಯ ಮೇಲೆ ದೊರೆತನ ಮಾಡಬೇಕೆಂದು ಮನುಷ್ಯರಿಗೆ ಅಪ್ಪಣೆ ಕೊಟ್ಟನು.

ಆದಿಕಾಂಡ 1:28ನೆ ವಚನವು ದೇವರು ಆದಾಮ ಮತ್ತು ಹವ್ವಳನ್ನು ಆಶೀರ್ವದಿಸಿದನೆಂಬುದಾಗಿ ಹೇಳುತ್ತದೆ. ಅದರ ಅರ್ಥವೇನು? ಇದು ಮನುಷ್ಯರ ಮತ್ತು ದೇವರ ನಡುವೆ ಯಾವ ತೆರನಾದ ಸಂಬಂಧವನ್ನು ಸೂಚಿಸುತ್ತದೆ?

ಆದಾಮ ಮತ್ತು ಹವ್ವಳು ತನ್ನ ದಯಾಶೀಲತೆಗೆ ಪ್ರತಿಕ್ರಿಯೆಯನ್ನು ತೋರಿಸುವವರಾಗಿ ತನ್ನ ಸಂಸರ್ಗದ ಅನ್ಯೋನ್ಯತೆಗೂ ಬರುವಂತಹ ಬುದ್ಧಿ ಜೀವಿಗಳೆಂದು ದೇವರು ಅವರನ್ನು ಸಂಬೋಧಿಸುತ್ತಾನೆ. ಸೃಷ್ಟಿಗೊಂಡ ಮಕ್ಕಳಾಗಿ ಆದಾಮ ಮತ್ತು ಹವ್ವಳು ಸೃಷ್ಟಿಮಾಡಿದ ತಂದೆಯಾದ ದೇವರ ಆಶೀರ್ವಾದ ಮತ್ತು ಸರಾಮರಿಕೆಯ ಮೇಲೆ ಆತುಕೊಳ್ಳುವವರನ್ನಾಗಿಯೂ ಸಹಾ ಮಾಡಿದನು. ಅವರಿಗೆ ಅಗತ್ಯವಾದುದೆಲ್ಲವನ್ನೂ ದೇವರು ಒದಗಿಸಿದನು. ಅವುಗಳನ್ನೆಲ್ಲಾ ಅವರು ಪಡೆಯಲರ್ಹವಾದುದನ್ನೇನನ್ನೂ ಅವರು ಮಾಡಿರಲಿಲ್ಲ. ಅವರು ತಾವು ಯಾವುದನ್ನು ಸಂಪಾದಿಸಿರಲಿಲ್ಲವೋ ಅದನ್ನು ಕೇವಲ ಪಡೆದುಕೊಂಡವರಾಗಿದ್ದರು.

ಮನುಷ್ಯನು ಗಂಡುಹೆಣ್ಣಾಗಿ ಸೃಷ್ಟಿಯಾದುದರ ಬಗ್ಗೆ ಓದುವಾಗ ಪಾಪದಲ್ಲಿ ಬೀಳುವ ಮೊದಲು ಮತ್ತು ನಂತರ ದೇವರೊಂದಿಗೆ ನಮ್ಮ ಸಂಬಂಧವು ಎಂಥದ್ದಾಗಿರಬೇಕೆಂದು ಆತನು ಬಯಸುತ್ತಾನೆಂಬ ಅಂಶಗಳನ್ನು ನಾವು ನೋಡುತ್ತೇವೆ. ಪಾಪದಲ್ಲಿ ಬಿದ್ದಿರುವ ಪರಿಸ್ಥಿತಿಯಲ್ಲೂ ನಾವು ದೇವರೊಂದಿಗೆ ಹೇಗೆ ಸಂಬಂಧವಿಟ್ಟುಕೊಳ್ಳಬೇಕೆಂಬುದನ್ನು ಅರ್ಥವಾಡಿಕೊಳ್ಳಲು ಸಹಕಾರಿಯಾದ ಸಾಮ್ಯವಾದ ವಿಧಾನಗಳಾವುವು ಎಂಬುದನ್ನು ಇಂದಿನ ಅಧ್ಯಯನವನ್ನು ಅವಲೋಕನ ಮಾಡಿದಾಗ ಕಂಡುಕೊಳ್ಳುತ್ತೇವೆ.

**ಬುಧವಾರ** **ಮಾರ್ಚ್ 31**

# ಮರದ ಹತ್ತಿರ

"ಇದಲ್ಲದೆ ಯಹೋವ ದೇವರು ಮನುಷ್ಯನಿಗೆ– ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು". (ಆದಿಕಾಂಡ 2:16,17).

ದೇವರು ವಿಧಿಸಿದ ಆಜ್ಞೆಯು ಆದಾಮ ಮತ್ತು ಹವ್ವಳಿಗೆ ತಮ್ಮ ಆಯ್ಕೆಯ ಸ್ವಾತಂತ್ರ್ಯವನ್ನು ಚಲಾಯಿಸುವ ಅವಕಾಶವನ್ನು ಒದಗಿಸಿತು. ದೇವರೊಂದಿಗಿನ ಅವರ ಸಂಬಂಧಕ್ಕೆ ಅವರು ಸಕಾರಾತ್ಮಕವಾಗಿ ಇಲ್ಲವೇ ನಕಾರಾತ್ಮಕವಾಗಿ ಪ್ರತಿಕ್ರಿಯೆ ತೋರಿಸುವ ಪರೀಕ್ಷೆಗೆ ಅವರನ್ನು ಒಡ್ಡಿತು. ಇದು ದೇವರು ಅವರನ್ನು ನೈತಿಕವಾಗಿ ಸ್ವತಂತ್ರ ಜೀವಿಗಳನ್ನಾಗಿ ಮಾಡಿದ್ದನೆಂದು ತೋರಿಸಿಕೊಡುತ್ತದೆ. ಹೌದು, ಒಂದು ವೇಳೆ ಅವರಿಗೆ ಅವಿಧೇಯರಾಗುವ ಅವಕಾಶವೇ ಇಲ್ಲದಿದ್ದರೆ ದೇವರು ಅವರಿಗೆ ಆರಂಭದಲ್ಲೇ ಎಚ್ಚರಿಕೆಯನ್ನು ಕೊಡುವ ಚಿಂತೆಯನ್ನು ಯಾಕೆ ಮಾಡುತ್ತಿದ್ದನು?

"ಈ ಅಧ್ಯಾಯದಲ್ಲಿ ಮುಂದಾಗಿ ಘಟಿಸುವ ಪ್ರತಿಯೊಂದು ಆಯ್ಕೆ ಸ್ವಾತಂತ್ರ್ಯದ ಪರಾಕಾಷ್ಠೆ ತಲುಪಲು ಎಡೆ ಮಾಡಿಕೊಡುತ್ತಿವೆ (ಆದಿಕಾಂಡ 2:16,17). ಮಾನವನ ಭವಿಷ್ಯವು ಈ ಒಂದು ನಿಷೇಧದ ಮೇಲೆ ಕೇಂದ್ರಗೊಂಡಿತ್ತು. ಮನುಷ್ಯನು ಅನೇಕ ವಿಷಯಗಳ ಮಧ್ಯೆ ಗಲಿಬಿಲಿಗೆ ಒಳಗಾಗಬಾರದಿತ್ತು. ಕೇವಲ ದೇವರ ವಿಧಿನಿಯಮ ಮಾತ್ರ ಅವರ ಮನಸ್ಸಿನಲ್ಲಿ ಇಡಲ್ಪಟ್ಟಿತ್ತು. ಆದುದರಿಂದ ಯೆಹೋವನು ತನ್ನ ಕರುಣೆಯ ಗುರುತಾಗಿ (ಬಿಲ್ಲೆಯಾಗಿ) ಅನೇಕ ನಿಷೇಧಗಳನ್ನು ವಿಧಿಸದೆ ಒಂದೇ ಒಂದು ನಿಷೇಧವನ್ನು ಅವರಿಗೆ ವಿಧಿಸಿದ್ದನು. ಇದರ ಜೊತೆಗೆ ಈ ಒಂದು ಆಜ್ಞೆಯು ಅವರಿಗೆ ಕಠೋರವಾಗಿರಬಾರದೆಂಬ ಕಾರಣಕ್ಕೆ ಎಲ್ಲಾ ಮರದ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನುವ ವಿಶಾಲವಾದ ಅನುಮತಿಯನ್ನು ಪ್ರತಿಯಾಗಿ ಅವರಿಗೆ ಕೊಟ್ಟಿದ್ದನು" – H.C. Leupold, Exposition of Genesis, ಒಂದನೇ ಸಂಪುಟ, 127ನೇ ಪುಟ.

ದೇವರು ಆದಾಮ ಮತ್ತು ಹವ್ವಳನ್ನು ತನ್ನ ಚಿತ್ತಕ್ಕೆ ವಿಧೇಯರಾಗಿ ನಡೆದುಕೊಳ್ಳಿರೆಂದು ಕೇಳುವುದರಿಂದ "ನಾನು ನಿಮ್ಮ ಸೃಷ್ಟಿಕರ್ತನು ನನ್ನ ಸ್ವರೂಪದಲ್ಲಿ ನಿಮ್ಮನ್ನುಂಟು ಮಾಡಿದ್ದೇನೆಂದು ಹೇಳುತ್ತಾನೆ. ನಿಮ್ಮ ಜೀವವು ನನ್ನಿಂದ ಉಳಿದಿದೆ. ನನ್ನಿಂದಲೇ ನೀವು ಜೀವಿಸುವಿರಿ, ಚಲಿಸುವಿರಿ ಮತ್ತು ಜೀವವನ್ನು ಹೊಂದಿರುವಿರಿ. ನಾನು ನಿಮ್ಮ ಜೀವನದ ಹಿತಕ್ಕಾಗಿ ಮತ್ತು ಸಂತೋಷಕ್ಕಾಗಿ ಅಗತ್ಯವಾದುದೆಲ್ಲವನ್ನೂ (ಆಹಾರ, ಆಶ್ರಮ ಮತ್ತು ಸಂಗಾತಿ) ನಿಮಗೆ ಒದಗಿಸಿದ್ದೇನೆ ಮತ್ತು ನನ್ನ ಕೆಳಗಿದ್ದುಕೊಂಡು ಎಲ್ಲದರ ಮೇಲೆ ದೊರೆತನ ಮಾಡಲು ನಿಮ್ಮನ್ನು ನೇಮಿಸಿದ್ದೇನೆ.

ನೀವು ಇದಕ್ಕೆ ಒಪ್ಪಿ ನನ್ನನ್ನು ಪ್ರೀತಿಸಿ ಈ ಸಂಬಂಧವನ್ನು ದೃಢಪಡಿಸುವವ–ರಾದರೆ ನಾನು ನಿಮ್ಮ ದೇವರಾಗಿರುತ್ತೇನೆ. ನೀವು ನನ್ನ ಮಕ್ಕಳಾಗಿರುವಿರಿ. ನೀವು ನಾನು ವಿಧಿಸಿದ ಈ ಆಜ್ಞೆಗೆ ಕೇವಲ ವಿಧೇಯರಾಗುವುದರಿಂದ ನನ್ನಲ್ಲಿ ಭರವಸವಿಟ್ಟು ನಮ್ಮ ಸಂಬಂಧವನ್ನು ಸ್ಥಿರಪಡಿಸುವಿರಿ.

ಅಂತಿಮವಾಗಿ, ದೇವರೊಂದಿಗಿನ ನಮ್ಮ ಸಂಬಂಧವು ಫಲದಾಯಕವಾಗಿ ದೀರ್ಘಕಾಲ ಉಳಿಯುಬೇಕಾದರೆ ನಾವು ಮುಕ್ತವಾಗಿ ಆತನ ಚಿತ್ತಕ್ಕೆ ವಿಧೇಯರಾಗಲು ಆಯ್ದುಕೊಳ್ಳಬೇಕು. ಆತನ ಚಿತ್ತವನ್ನು ತಿರಸ್ಕರಿಸುವುದೆಂದರೆ ಆತನಿಗೆ ಒಳಪಡದೆ ನಮ್ಮಷ್ಟಕ್ಕೆ ನಾವು ಸ್ವತಂತ್ರರಾಗಿ ನಡೆದುಕೊಳ್ಳುವುದಾಗಿದೆ. ನಮಗೆ ಆತನು ಬೇಕಾಗಿಲ್ಲವೆಂದು ನಂಬುವುದನ್ನು ಸೂಚಿಸುತ್ತದೆ. ಇದನ್ನು ಆಯ್ದುಕೊಳ್ಳುವುದರ ಫಲಿತಾಂಶವಾಗಿ ಕೆಟ್ಟದ್ದರ ಅರಿವು ಬರುತ್ತದೆ, ಕೆಟ್ಟದ್ದು ನಮ್ಮನ್ನು ಪರಕೀಯತೆಗೂ, ಒಂಟಿತನಕ್ಕೂ ಹತಾಶೆಗೂ ಕೊನೆಗೆ ಮರಣಕ್ಕೂ ನಡೆಸುತ್ತದೆ.

ದೇವರು ಆದಾಮ ಮತ್ತು ಹವ್ವಳ ನಂಬಿಕೆ ಮತ್ತು ನಿಷ್ಠೆಯನ್ನು ಪರೀಕ್ಷಿಸಿದನು. ಅವರು ತಮ್ಮನ್ನು ಸೃಷ್ಟಿಸಿ ತಮಗೆ ಅಗತ್ಯವಾದುದೆಲ್ಲವನ್ನು ಕೊಟ್ಟು ಉಲ್ಲಾಸ ನೀಡುವ ಪ್ರಪಂಚವನ್ನು ಕೊಟ್ಟ ದೇವರಿಗೆ ನಿಷ್ಠರಾಗುತ್ತಾರೋ ಅಥವಾ ಆತನ ಚಿತ್ತಕ್ಕೆ ವಿಧೇಯರಾಗದೆ ತಮ್ಮ ಸ್ವಂತ ದಾರಿಯಲ್ಲಿ ನಡೆಯುವರೋ ಎಂಬುದರ ಪರೀಕ್ಷೆ. ಅವರ ನಿಷ್ಠೆ ಮತ್ತು ನಂಬಿಕೆಗೆ ಒಳ್ಳೇದರ ಮತ್ತು ಕೆಟ್ಟದ್ದರ ಅರಿವನ್ನು

ಹುಟ್ಟಿಸುವ ಹಣ್ಣಿನ ಮರದ ಮೂಲಕ ಪರೀಕ್ಷೆಯಾಯ್ತು. ಯಾವ ರೀತಿಯಲ್ಲಿ ಅದೇ ತೆರನಾದ ಪರೀಕ್ಷೆಗಳನ್ನು ನಾವು ದಿನಾಲು ಎದುರಿಸುತ್ತೇವೆ? ದೇವರು ಕೊಟ್ಟ ಧರ್ಮಪ್ರಮಾಣವು ಹೇಗೆ ಆದಿಕಾಂಡ 2:16,17 ರಲ್ಲಿರುವ ಆಜ್ಞೆಗೆ ಸಮಾನವಾಗಿ ಕಾರ್ಯಮಾಡುತ್ತದೆ?

**ಗುರುವಾರ** **ಏಪ್ರಿಲ್ 1**

## ಸಂಬಂಧವನ್ನು ಮುರಿದುಹಾಕುವುದು

ನಾವು ಸಾಮಾನ್ಯವಾಗಿ ನಮಗೆ ಪರಿಚಿತರಾದವರನ್ನು ನಂಬುತ್ತೇವೆ. ಅಪರಿಚಿತರ ಮೇಲೆ ಸಹಜವಾಗಿ ಸಂಶಯಪಡುತ್ತೇವೆ. ಹವ್ವಳು ಸ್ವಾಭಾವಿಕವಾಗಿ ಸೈತಾನನ ಮೇಲೆ ಸಂಶಯ ಪಟ್ಟಿರುತ್ತಿದ್ದಳು. ಮಾತ್ರವಲ್ಲದೆ ದೇವರಿಗೆ ವಿರುದ್ಧವಾಗಿ ಸೈತಾನನು ಮಾಡಿದ ಯಾವುದೇ ನೇರವಾದ ಆಕ್ರಮಣವು ಹವ್ವಳನ್ನು ರಕ್ಷಣಾತ್ಮಕವಾಗಿ ಎಚ್ಚರವಹಿಸುವಂತೆ ಮಾಡುತ್ತಿತ್ತು. ಹವ್ವಳನ್ನು ಅಸಹಾಯಕಳನ್ನಾಗಿ ಮಾಡಲು ಸೈತಾನನು ಯಾವ ಕಪಟ ಮಾರ್ಗವನ್ನು ಅನುಸರಿಸಿದನು. ಹವ್ವಳು ರಕ್ಷಣೆಯನ್ನು ಉಪೇಕ್ಷಿಸುವಂತೆ ಮಾಡಿದನು.

ಹವ್ವಳ ಉಲ್ಲಂಘನೆಯು ವಿಷಾದಕರವಾಗಿತ್ತು, ಮಾನವ ಕುಟುಂಬವು ಅನುಭವಿಸುವ ದುಃಖವು ಶೋಕಭರಿತವಾಗಿತ್ತು.

ಹವ್ವಳ ಉಲ್ಲಂಘನೆಯು ವಿಷಾದಕರವಾಗಿದ್ದಂತೆ, ಮಾನವ ಕುಲಕ್ಕೆ ಮುಂದೆ ಒದಗುವ ಪರಿಸ್ಥಿತಿ ಕರುಣಾಜನಕವಾಗಿದ್ದಂತೆ ಆಕೆಯ ಆಯ್ಕೆಯು ಮಾನವ ಜನಾಂಗವನ್ನು ಶಿಕ್ಷೆಗೆ ಒಳಪಡಿಸುವ ಅಗತ್ಯವಿರಲಿಲ್ಲ. ಹಾಗೆ ಒಳಪಡಿಸುವಂಥದ್ದು ಆದಾಮನ ಉದ್ದೇಶಪೂರ್ವಕವಾದ ಆಯ್ಕೆ ದೇವರ ಸುವ್ಯವಸ್ಥಿತವಾದ ಆಜ್ಞೆಯ ಪೂರ್ಣ ಅರಿವನ್ನು ಹೊಂದಿದ್ದ ಆದಾಮನ ಉದ್ದೇಶಪೂರ್ವಕವಾದ ಉಲ್ಲಂಘನೆಯು ಮಾನವ ಕುಲಕ್ಕೆ ಪಾಪ ಮತ್ತು ಮರಣಗಳು ಅನಿವಾರ್ಯವಾಯಿತು. ಹವ್ವಳು ಮೋಸಕ್ಕೆ ಗುರಿಯಾದಳು. ಆದಾಮನು ಸ್ವಇಚ್ಛೆಯಿಂದ ದೇವರನ್ನು ಉಲ್ಲಂಘಿಸಿದನು– The SDA Bible commentary, ಒಂದನೇ ಸಂಪುಟ 231ನೇ ಪುಟ.

ದೇವರ ಆಜ್ಞೆಯನ್ನು ಅಲಕ್ಷ್ಯ ಮಾಡಿ, ಅಜಾಗರೂಕತೆಯಿಂದ ಉಲ್ಲಂಘನೆ ಮಾಡಿದುದರ ಫಲಿತಾಂಶವಾಗಿ ದೇವರ ಮತ್ತು ಮನುಷ್ಯರ ನಡುವಿನ ಸಂಬಂಧವು ಮುರಿದುಹೋಯಿತು. ದೇವರ ಜೊತೆ ಮುಕ್ತವಾಗಿದ್ದ ಅನ್ಯೋನ್ಯತೆಯು ಹೋಗಿ ಆತನ ಸಮಕ್ಷಮದಿಂದ ಭಯಪಟ್ಟು ಓಡಿಹೋಗುವಂತಾಯ್ತು (ಆದಿಕಾಂಡ 3:1–6).

ಒಡನಾಟ ಮತ್ತು ಅನ್ಯೋನ್ಯತೆಯನ್ನು ಜಾಗದಲ್ಲಿ ಅನಾದರ ಮತ್ತು ಅಗಲುವಿಕೆಗಳು ಬಂದುವು. ಪಾಪವು ತಲೆದೋರಿತು ಅದರ ಎಲ್ಲಾ ಕೆಟ್ಟ ಫಲಿತಾಂಶಗಳೂ ಹಿಂಬಾಲಿಸಿದವು. ಏನಾದರೊಂದನ್ನು ಮಾಡದೆ ಹೋಗಿದ್ದರೆ, ಮಾನವತೆಯು ಶಾಶ್ವತವಾಗಿ ನಾಶಕ್ಕೆ ಗುರಿಯಾಗುತ್ತಿತ್ತು.

ಇಂತಹ ದುರಂತಮಯ ಸಂದರ್ಭದಲ್ಲಿ ದೇವರು ಎಂತಹ ನಿರೀಕ್ಷೆ ಮತ್ತು ಮಾರ್ಗದರ್ಶನದ ಮಾತುಗಳನ್ನಾಡಿದನು? (ಆ.ಕಾಂಡ 3:15).

ದೇವರಿಂದ ಬಂದ ಭವಿಷ್ಯದ ನಿರೀಕ್ಷೆಯುಳ್ಳ ಸೋಜಿಗದ ಮಾತು ಮತ್ತು ಸ್ತ್ರೀಗೂ ಅದಕ್ಕೂ ಮತ್ತು ಆಕೆಯ ಸಂತಾನಕ್ಕೂ ನಡುವೆ ಇರುವ ದೈವನಿಯಮಿತ ಹಗೆತನದ ಬಗ್ಗೆ ಹೇಳುತ್ತದೆ. ಇದು ಸ್ತ್ರೀಯ ಸಂತಾನವನ್ನು ಪ್ರತಿನಿಧಿಸುವಾತನು ಬಂದು ಸೈತಾನನಿಗೆ ತಲೆ ಜಜ್ಜುವ ಮಾರಣಾಂತಿಕ ಪೆಟ್ಟನ್ನು ನೀಡುವ ಅಂತಿಮ ಹಂತವನ್ನು ತಲುಪುತ್ತದೆ. ಸೈತಾನನಿಗಾದರೋ ಮೆಸ್ಸೀಯನ ಹಿಮ್ಮಡಿಯನ್ನು ಕಚ್ಚಲು ಸಾಧ್ಯವಾಗುತ್ತದೆಯಷ್ಟೆ.

ದೇವರು ಬೆಂಬಲಿಸಿದ ವಾಗ್ದಾನದಲ್ಲಿ ಮೆಸ್ಸೀಯನ (ಅಭಿಷಿಕ್ತನ) ವಾಗ್ದಾನವು ದೇವರು ಕೊಟ್ಟ ಮತ್ತು ದೆವರ ಬೆಂಬಲಿತವಾದ ವಾಗ್ದಾನವಾದುದರಿಂದ ಅಂತಹ ಅಸಹಾಯಕ ಸ್ಥಿತಿಯಲ್ಲೂ ಆದಾಮ ಮತ್ತು ಹವ್ವಳು ತಮ್ಮ ಜೀವಿತವು ಪರಿವರ್ತನೆಯಾಗುವ ನಿರೀಕ್ಷೆ ಮತ್ತು ಭರವಸೆಯನ್ನು ಹೊಂದಿಕೊಂಡರು.

ಅಂತಿಮವಾಗಿ ಜಯಹೊಂದುವ, ಮೆಸ್ಸೀಯನು ಬರುವ ವಾಗ್ದಾನವು ಆ ಸಂದರ್ಭದಲ್ಲಿ ಎಷ್ಟೇ ಅಸ್ಪಷ್ಟವಾಗಿದ್ದರೂ ಪಾಪವು ಅವರ ಮೇಲೆ ಹಾಕಿದ್ದ ಕತ್ತಲನ್ನು ತೆರವು ಮಾಡಿತು.

ಆದಿಕಾಂಡ 3:9ನ್ನು ಓದಿರಿ. ಈ ವಚನದಲ್ಲಿ ದೇವರು ಆದಾಮ ಮತ್ತು ಹವ್ವಳನ್ನು ಕುರಿತು "ನೀವು ಎಲ್ಲಿದ್ದೀರಿ?" ಎಂದು ಕರೆಯುತ್ತಾನೆ. ತಪ್ಪಿತಸ್ಥಭಾವದಿಂದ ತುಂಬಿದ್ದ ಮಾನವಕುಲವನ್ನು ತನ್ನ ಕಡೆಗೆ ತಿರುಗಿ ಸೆಳೆದುಕೊಳ್ಳುವ ಮಾತುಗಳಾಗಿದ್ದವು. ಸಂಕ್ಷಿಪ್ತವಾಗಿ ಹೇಳುವುದಾದರೆ ಪಾಪದಲ್ಲಿ ಬಿದ್ದ ಮನುಷ್ಯನಿಗೆ ದೇವರಿಂದ ಬಂದ ಮೊದಲ ಮಾತುಗಳ ಕೃಪೆ ಮತ್ತು ಕರುಣೆಯ ನಿರೀಕ್ಷೆಯಿಂದ ತುಂಬಿದ್ದವು. ಈಗಲೂ ಸಹಾ ದೇವರು ಯಾವ ರೀತಿಯಲ್ಲಿ ತನ್ನ ಕರುಣೆ ಮತ್ತು ಕೃಪೆ ಹೊಂದಲು ನಮ್ಮನ್ನು ಹುಡುಕಿ ಕರೆಯುತ್ತಾನೆ.

**ಶುಕ್ರವಾರ** **ಏಪ್ರಿಲ್ 2**

**ಹೆಚ್ಚಿನ ಚಿಂತನೆ :** ಸತ್ಯವೇದವು ಪಾಪಿಗಳನ್ನು ಮತ್ತು ಹಿಂಜರಿದವರನ್ನು ಕರೆಯುವ ವಚನಗಳಿಂದ ತುಂಬಿದೆ. ಕೀರ್ತನೆ 95:7,8, ಯೆಶಾಯ 55:1,2,6,7 ಲೂಕ 15:3–7 ಮತ್ತು ಲೂಕ 19:10 ಇನ್ನಿತರ ಯಾವ ವಚನಗಳನ್ನು ನೀವು ಕಾಣುವಿರಿ?

ಎಲೆನ್ ಜಿ ವೈಟಮ್ಮನವರ ನಮ್ಮ ಪಿತೃಗಳು ಮತ್ತು ಪ್ರವಾದಿಗಳು ಪುಸ್ತಕದಲ್ಲಿ "The Creation", ಅಧ್ಯಾಯ ಪುಟ 44–51, The temptation and fall ಅಧ್ಯಾಯ ಪುಟ 52–62 ಮತ್ತು The plan of Redemption ಅಧ್ಯಾಯ ಪುಟ 63–70ನ್ನೂ ಸಹಾ ಓದಿರಿ.

## ಆರೋಗ್ಯದ ಲೇಖನಮಾಲೆ

### ಮೊದಲನೇ ವಾರ

## * ಸುವರ್ಣ ಆರೋಗ್ಯ ವ್ಯಾಸಂಗಕ್ರಮ

ಈ ತ್ರೈಮಾಸಿಕದಲ್ಲಿ ಏಷ್ಯಾಖಂಡ ಹಾಗೂ ನಮ್ಮ ದೇಶದಲ್ಲಿ ಕಂಡುಬರುವ 26 ಸಾಮಾನ್ಯ ವ್ಯಾಧಿಗಳನ್ನು ಗುರುತಿಸಿ ಅವುಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಇವುಗಳಿಗೆ ಆರೋಗ್ಯಕರ ಜೀವನಶೈಲಿ ಆಧರಿಸಿದ ಚಿಕಿತ್ಸೆಯನ್ನೂ ಸಹ ನೀಡಲಾಗಿದೆ. ವಾರಕ್ಕೆ ಎರಡು ರೋಗಗಳಂತೆ ಈ ತ್ರೈಮಾಸಿಕದ 13 ವಾರಗಳಲ್ಲಿ ಎಲ್ಲಾ 26 ರೋಗಗಳ ಬಗ್ಗೆ ತಿಳಿಸಿ ಅದಕ್ಕೆ ಸರಳ ಚಿಕಿತ್ಸೆಯನ್ನು ಸಹ ಹೇಳಲಾಗಿದೆ.

ಆಸಕ್ತಿಯುಳ್ಳ ಸ್ತ್ರೀ–ಪುರುಷರು ಈ ಸಾಮಾನ್ಯ ಕಾಯಿಲೆಗಳನ್ನು ಅರಿತುಕೊಂಡು, ನಿಮ್ಮ ನೆರೆಹೊರೆಯವರು ಈ ತೊಂದರೆಗಳಿಗೆ ಒಳಗಾದಾಗ ಇಲ್ಲಿ ತಿಳಿಸಿರುವ ಪ್ರಕಾರ ಪ್ರಥಮ ಚಿಕಿತ್ಸೆ ಮಾಡಿ ರೋಗ ಹೆಚ್ಚಾಗುವುದನ್ನು ತಡೆಗಟ್ಟಬಹುದು. ನೆನಪಿಡಿ: ನೀವು ವೈದ್ಯರಲ್ಲ, ಪ್ರಥಮ ಚಿಕಿತ್ಸೆ ಮಾಡುವವರು ಮಾತ್ರ ಪ್ರಥಮ ಚಿಕಿತ್ಸೆ ನೀಡಿದ ನಂತರ ತಜ್ಞ ವೈದ್ಯರ ಬಳಿಗೆ ರೋಗಿಯನ್ನು ಕರೆದುಕೊಂಡು ಹೋಗುವುದು ಬಹುಮುಖ್ಯ.

## * ವಿಷಮ ಶೀತಜ್ವರ (ಟೈಫಾಯಿಡ್)

**ವಿಷಮ ಶೀತಜ್ವರ ಎಂದರೇನು?**

ಎದೆ ಮತ್ತು ಹೊಟ್ಟೆಯ ಮೇಲೆ ಕೆಂಪುಗುಳ್ಳೆಗಳೇಳುವ ಮತ್ತು ಕರುಳಿನಲ್ಲಿ ತೀವ್ರ ಕೆರಳಿಕೆಯ ಉರಿಯುಂಟಾಗುವ, ಒಂದು ಸೋಂಕು ಜ್ವರ, ಇದು ಬ್ಯಾಕ್ಟೀರಿಯಾಗಳಿಂದ ಬರುತ್ತದೆ.

**ಇದನ್ನು ಗುರುತಿಸುವುದು ಹೇಗೆ?**

ಮೊದಲನೆ ವಾರದಲ್ಲಿ ಶೀತದಂತೆ ಆರಂಭ. ನಾಡಿಬಡಿತ ನಿಧಾನವಾದಂತೆ, ಪ್ರತಿದಿನವೂ ಜ್ವರ ಹೆಚ್ಚಾಗುತ್ತಾ ಹೋಗುತ್ತದೆ. ಕೆಲವು ಸಾರಿ ಅತಿಭೇದಿ, ಶರೀರದಿಂದ ನೀರು ಹೋಗುವ ನಿರ್ಜಲೀಕರಣ, ನಡುಗುವಿಕೆ ಹಾಗೂ ಮನಸ್ಸು ಭ್ರಮೆಗೆ ಒಳಗಾಗುವಂತೆ ಅನಿಸುತ್ತದೆ.

ಎರಡನೇ ವಾರದಲ್ಲಿ ಜ್ವರ ಅತಿಯಾಗಿ ಹೆಚ್ಚುತ್ತದೆ ಮತ್ತು ಎದೆ ಹಾಗೂ ಹೊಟ್ಟೇಯ ಮೇಲೆ ಕೆಂಪುಗುಳ್ಳೆಗಳಾಗುತ್ತದೆ. ಮೂರನೆ ವಾರದಲ್ಲಿ ಎಲ್ಲಾ ರೋಗಲಕ್ಷಣಗಳು ಹೊರಟು ಹೋಗುತ್ತವೆ.

**ಕಾರಣಗಳು :**

ಮಾನವ ಮಲದಿಂದ ಕಲುಷಿತಗೊಂಡ ಆಹಾರ ಅಥವಾ ನೀರಿನಿಂದ.

**ಏನು ಮಾಡಬೇಕು?**

1. ದಿನಕ್ಕೆ ನಾಲ್ಕು ಬಾರಿ ತಣ್ಣೀರಿನ ಬಟ್ಟೆಯನ್ನು ಹಣೆಗೆ ಹಾಕಿ ಜ್ವರ ನಿಯಂತ್ರಿಸಿ.

2. ದಿನಕ್ಕೆ ನಾಲ್ಕು ಲೀಟರ್ ನೀರು ಕುಡಿಸಬೇಕು.
3. ಸಾಧ್ಯವಾದಷ್ಟು ಬೇಗ ವೈದ್ಯರನ್ನು ಭೇಟಿ ಮಾಡಿ.

## * ಮಲೇರಿಯಾ

**ಮಲೇರಿಯಾ ಎಂದರೇನು?**

ಅನಾಫಿಲೀಸ್ ಎಂಬ ಹೆಣ್ಣುಸೊಳ್ಳೆಯ ಕಡಿತದಿಂದ ರೋಗಕಾರಕ ಸೂಕ್ಷ್ಮ ಜೀವಿಗಳು ರಕ್ತದಲ್ಲಿ ಸೇರಿ, ಅದರಿಂದ ಹುಟ್ಟುವ ಮತ್ತು ಬಿಟ್ಟು ಬಿಟ್ಟು ಜ್ವರ ಬರುವ ಒಂದು ರೋಗ. ರಕ್ತದಲ್ಲಿ ಉಂಟಾಗುವ ಒಂದು ಸೋಂಕು.

**ಇದನ್ನು ಗುರುತಿಸುವುದು ಹೇಗೆ?**

2–3 ದಿನಗಳಿಗೆ ಒಂದಾವರ್ತಿ ರೋಗ ಹಠಾತ್ತನೆ ದಾಳಿ ಮಾಡುತ್ತದೆ. ಮೊದಲು ಚಳಿ, ಜ್ವರ, ನಂತರ ಅಧಿಕವಾದ ಜ್ವರ, ನಂತರ ರೋಗಿ ಹೆಚ್ಚಾಗಿ ಬೆವರುತ್ತಾನೆ ಮತ್ತು ಜ್ವರ ಹೋಗುತ್ತದೆ. ಇದು ಪುನರಾವರ್ತನೆಗೊಳ್ಳುತ್ತದೆ.

**ಏನು ಮಾಡಬೇಕು?**

1. ದಿನಕ್ಕೆ ನಾಲ್ಕು ಬಾರಿ ತಣ್ಣೀರು ಬಟ್ಟೆ ಹಣೆಗೆ ಹಾಕಿ ಜ್ವರ ನಿಯಂತ್ರಿಸಿ.
2. ದೇಹದಲ್ಲಿ ಹೊರ ಹೋಗುವ ನೀರಿನಾಂಶ ಕಡಿಮೆಯಾಗದಂತೆ ರೋಗಿಯು ದಿನಕ್ಕೆ ನಾಲ್ಕು ಲೀಟರ್ ಬಿಸಿ ಮಾಡಿ ಆರಿಸಿದ ಶುದ್ಧವಾದ ನೀರು ಕುಡಿಯಬೇಕು.
3. ತಕ್ಷಣವೇ ವೈದ್ಯರನ್ನು ಕಾಣಬೇಕು.